

ಗುಬ್ಬೇರ ಬೆಟ್ಟದಿಂದ ರಾಯಚೂರು ನಗರದ ನೋಟ

# ನಮ್ಮೂರು ಅಂದ್ರೆ ಸುಮ್ನೆ ಅಲ್ಲ!

**ರಾಜ ಊರು, ಪರ್ಮ್ನ ರಾಜೂರು, ರಾಚನೂರು, ರಾಜಚೂರು ಎಂಬ ಹೆಸರು ರಾಯಚೂರಿಗೆ ಇತ್ತೆಂದು ಹೇಳ್ತವ ಇತಿಹಾಸದ ಪುಟಗಳು. ಈ ಫಲವತ್ತಾದ ಭೂಮಿಯನ್ನು ತಮ್ಮದಾಗಿಸಿಕೊಳ್ಳಾಕ ಇತಿಹಾಸದಾಗ ಯುದ್ಧಗಳೇ ನಡೆದಾವ. ಎಲ್ಲಾ ಕ್ಷೇತ್ರದಲ್ಲೂ ಒಂದ್ಹೆಜ್ಜೆ ಮುಂದಿರುವ ನಮ್ ರಾಯಚೂರು ಮಾದರಿ ಅದ.**

■ ಈರಣ್ಣ ಬೆಂಗಾಲಿ

ಬಿಸ್ಲೂರು, ಬಿಸ್ಲೂರು ಎಂದು ನಮ್ ಊರಿನ ಬಗ್ಗೆ ಮೂಗ್ ಮುರಿಬ್ಯಾಡ್ರಿ! ಅನ್ನ, ಚಿನ್ನ, ಬೆಳಕನ್ನ ನೀಡುವ 'ನಮ್ ರಾಯಚೂರು' ಜಗತ್ತಿಗೆ ಮಾದರಿ ಆಗ್ಯಾದ! ರಾಯಚೂರು ಜಿಲ್ಲೆಯ ಉತ್ತರಕ್ಕ ಕೃಷ್ಣಾ ಮತ್ತು ದಕ್ಷಿಣಕ್ಕ ತುಂಗಭದ್ರಾ ನದಿ ಹರಿತಾವ. ಈ ಎರಡ್ ನದಿಗಳ ನಡುಕ ಇರೋದೇ ರಾಯಚೂರು ಜಿಲ್ಲೆ. ಇದ್ನ ಇರ್ದೊರೆ ನಾಡು, ಎಡೆದೊರೆ ನಾಡು ಮತ್ತ ದೋ ಅಬ್ ಪ್ರದೇಶ ಅಂತ ಖ್ಯಾತಿ ಪಡೆದಾದ. ವಿಜಯನಗರ ಅರಸರ ಕಾಲದಾಗ ಬಾಳ ಮಹತ್ವದ ಪಾತ್ರವಹಿಸಿದ್ದ ರಾಯಚೂರು ಕ್ವಾಟಿ ಕೊತ್ತಲೆಗಳ ನಗರಿ ಎಂದಾ ಹೆಸರಾಗ್ಯಾದ. ನಮ್ ಜಿಲ್ಲೆಯ ತುಂಬಾ ಕ್ವಾಟೆಗಳು ಅಷ್ಟೆ ಅಲ್ದೆ ಶಾಸನಗಳು, ವೀರಗಲ್ಲುಗಳು, ನಾಣ್ಯಗಳು ಹೀಗೆ ಇನ್ನು ಮುಂತಾದ ಸ್ಮಾರಕಗಳು, ಗತಕಾಲದ ಚರಿತ್ರೆ ಹೇಳುವ ಇತಿಹಾಸದ ಕುರುಹುಗಳು ನೋಡಾಕ ನಮಗ ಈಗಲೂ ಸೆಳಿತಾವ.

ರಾಯಚೂರು ಜಿಲ್ಲೆಯ ಜನಪದರು, ರಂಗಭೂಮಿಯ ಕಲಾವಿದರು, ಸಾಹಿತಿಗಳು, ಚಿತ್ರಕಲಾವಿದರು, ಗಾಯಕರು, ನೃತ್ಯ ಕಲಾವಿದರು, ಸಂಗೀತ ಕಲಾವಿದರು ಕಲಾ ಸಿರಿವಂತಿಕೆಯನ್ನು ಹೆಚ್ಚಿಸ್ಯಾರ. ವಿವಿಧ ಕ್ಷೇತ್ರದ ಸಾಧಕರ, ಮಹನೀಯರ ಕೊಡುಗೆ ಅಪಾರ ಅದ. ದಾಸ ಸಾಹಿತ್ಯ, ಕನ್ನಡ ಗಜಲ್ ಸಾಹಿತ್ಯ, ಶರಣ ಸಾಹಿತ್ಯ, ಹೈಕು ಸಾಹಿತ್ಯ, ಕಥಾ ಸಾಹಿತ್ಯ, ದಲಿತ ಸಾಹಿತ್ಯ ಇನ್ ಮುಂತಾದ ಪ್ರಕಾರಗಳು ನಮ್ ಜಿಲ್ಲಾದಿಂದ ಇಡೀ ನಾಡಿನ್ಯಾಗ ಸದ್ದು ಮಾಡ್ಯಾವ ಅನ್ನಾದ ಹೆಮ್ಮೆ ನಮಗ. ದೇಶದ ಸ್ವಾತಂತ್ರ್ಯಕ್ಕ ಈ ಭಾಗದವರು ಸಹ ಹೋರಾಡಿ ತಮ್ಮ ಅಮೂಲ್ಯ ಕೊಡುಗೆ ಸಲ್ಲಿಸಿದ್ದಾರೆ. ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕ ವಿಮೋಚನೆಗಾಗಿ ಅನೇಕರು ಹೋರಾಟ ಮಾಡ್ಯಾರ. ಪ್ರತಿ ವರುಸ ಸೆಪ್ಟೆಂಬರ್ 17ಕ್ಕ 'ಕಲ್ಯಾಣ ಕರ್ನಾಟಕ' ಉತ್ಸವವೆಂದು ಧ್ವಜಾರೋಹಣ ಮಾಡಿ, ಖುಷಿ ಪಡ್ತಾರ.

ನಮ್ ಜಿಲ್ಲೆಯ ಭೂಮಿ ಫಲವತ್ತಾಗ್ಯಾದ, ಅದ್ಕ ಈ ಭೂಮಿಯನ್ನ ತಮ್ಮದಾಗಿಸಿಕೊಳ್ಳಾಕ ಇತಿಹಾಸದಾಗ ಯುದ್ಧಗಳೇ ನಡೆದಾವ. ಮುದಗಲ್, ರಾಯಚೂರು, ಮಲಿಯಬಾದ್, ಜಲದುರ್ಗದ ಕೋಟೆಗಳು ರಾಯಚೂರು ಜಿಲ್ಲೆಯ ಇತಿಹಾಸದ ಕಥೆ ಹೇಳ್ತಾವ. ವಿಜಯನಗರ ಅರಸರ, ಬಹುಮನಿ ಸುಲ್ತಾನರ, ಬಿಜಾಪುರ ಆದಿಲ್‌ಶಾಹಿ ಆಳ್ವಿಕೆಯ ಕಾಲಘಟ್ಟ ಬಹುಮುಖ್ಯ ಅದ. ಆಗಿನ ವಿಶಾಲ ಮೈಸೂರಿನ ಹತ್ತೊಂಬತ್ತು ಜಿಲ್ಲೆಗಳಲ್ಲಿ ಒಂದಾಗಿದ್ದ ರಾಯಚೂರು ಗುಲಬರ್ಗಾ ವಿಭಾಗದ ವಿಸ್ತಾರದಲ್ಲಿ ಎರಡನೇದು ಆಗ್ಯಾದ. ಮುಂಚೆ ರಾಜಊರು, ಪರ್ಮ್ನ ರಾಜೂರು, ರಾಚನೂರು, ರಾಜಚೂರು ಎಂಬ